

## ಹೊಸ ಕವಲುಗಳ ಲತೆ

ಹೆಸರಿಗೆ ಅನ್ವರ್ಥಕದಂತಿರುವ ಚೆಲುವೆ ಲತಾ ಹೆಗಡೆ ಅವರ ಹುಟ್ಟೂರು ಉತ್ತರಕನ್ನಡದ ಶಿರಸಿ. ಬೆಳೆದಿದ್ದೆಲ್ಲ ನ್ಯೂಜಿಲೆಂಡ್. ಅಲ್ಲಿಯೇ ಮಾಡೆಲಿಂಗ್ ಲೋಕದ ಮೋಹಕ ಕರೆಗೆ ಮರುಳಾದ ಅವರು ನಂತರ ತೆಲುಗಿನ 'ತುಂಟರಿ' ಸಿನಿಮಾ ಮೂಲಕ ಅಭಿನಯ ಜೀವನಕ್ಕೂ ಅಡಿಯಿಟ್ಟರು. ಕನ್ನಡದ ನೆಲದಿಂದ ಬಲುದೂರ ಬೆಳೆದರೂ– 'ಛೆ, ನಾನು ನಟಿಸುವ ಮೊದಲ ಸಿನಿಮಾ ಕನ್ನಡದ್ದಾಗಿರಬೇಕಿತ್ತು' ಎಂದು ಅವರು ಪರಿತಪಿಸಿದ್ದರಂತೆ. ಆ ಆಸೆ ಈಡೇರಲು ಬಹುಕಾಲವೇನೂ ಕಾಯಬೇಕಾಗಲಿಲ್ಲ. ಅವರು ಮಹೇಶ್ ಬಾಬು ನಿರ್ದೇಶನದ 'ಅತಿರಥ' ಸಿನಿಮಾ ಮೂಲಕ ಚಂದನವನಕ್ಕೂ ಹಬ್ಬಿದರು.

ಪ್ರಸ್ತುತ ಲತಾ ಅವರು ವಿನಯ ರಾಘವೇಂದ್ರ ಅವರ ಜೊತೆ ತೆರೆ ಹಂಚಿಕೊಂಡಿರುವ 'ಅನಂತು ವರ್ಸಸ್ ನುಸ್ರತ್' ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಯಾಗಿವೆ. ಈ ಚಿತ್ರದಲ್ಲಿ ಮುಸ್ಲಿಂ ಹುಡುಗಿಯಾಗಿ ಅವರು ಕಾಣಿಸಿಕೊಂಡಿದ್ದಾರೆ. ಅದಕ್ಕಾಗಿ ಸಾಕಷ್ಟು ಸಿದ್ಧತೆಯನ್ನೂ ಮಾಡಿಕೊಂಡಿದ್ದಾರಂತೆ ಲತಾ.

'ಕನ್ನಡದ ಸಿನಿಮಾದಲ್ಲಿ ನಟಿಸುವ ಅವಕಾಶಕ್ಕಾಗಿ ಸದಾ ಕಾಯುತ್ತೇನೆ; ಹಾಗಂತ ಬೇರೆ ಭಾಷೆಗಳಿಂದ ಒಳ್ಳೆಯ ಸಿನಿಮಾದಲ್ಲಿ ನಟಿಸಲು ಅವಕಾಶ ಬಂದರೆ ಒಲ್ಲೆ ಎನ್ನಲಾರೆ' ಎನ್ನುವುದು ಅವರ ನಿಲುವು. ಅದಕ್ಕೆ ತಕ್ಕ ಹಾಗೆಯೇ ಅವರಿಗೆ ಕನ್ನಡದೊಟ್ಟಿಗೆ ತೆಲುಗು ಭಾಷೆಯಿಂದಲೂ ಹಲವು ಅವಕಾಶಗಳು ಒದಗಿ ಬರುತ್ತಿವೆ. ಮಲಯಾಳಂನ 'ಚಾರ್ಲಿ' ಸಿನಿಮಾ ರೀಮೇಕ್ 'ಉತ್ಸವ' ಚಿತ್ರದಲ್ಲಿಯೂ ಅವರು ನಾಯಕಿ. ತಮಿಳಿನ 'ಓ ಅಂದನಾತ್ಕಲ್' ಸಿನಿಮಾಗೂ ಅವರು ಸಹಿ ಹಾಕಿದ್ದಾರೆ.

'ಅನಂತು ವರ್ಸಸ್ ನುಸ್ರತ್' ಚಿತ್ರ ತನಗೆ ಕನ್ನಡದಲ್ಲಿ ಇನ್ನಷ್ಟು ಗಟ್ಟಿಯಾದ ಪಾತ್ರಗಳಲ್ಲಿ ನಟಿಸುವ ಅವಕಾಶ ತಂದುಕೊಡಲಿದೆ ಎಂಬ ಹಂಬಲದಲ್ಲಿ ಅವರು ಕಾಯುತ್ತಿದ್ದಾರೆ.



## ಅವಕಾಶಗಳ ಆಕಾಶದಲ್ಲಿ ಆಶಿಕಾ

ಸದ್ಯ ಕನ್ನಡ ಚಿತ್ರರಂಗದಲ್ಲಿ ಬೇಡಿಕೆಯ ಗ್ರಾಫ್ ಏರಿಸಿಕೊಳ್ಳುತ್ತಿರುವ ನಟಿಯರಲ್ಲಿ ಆಶಿಕಾ ರಂಗನಾಥ್ ಕೂಡ ಒಬ್ಬರು. 'ಮುಗುಳುನಗೆ' ಚಿತ್ರದ ಪಾತ್ರ ಮತ್ತು 'ವಿಕ್ಟರಿ 2' ಗೆಲುವು ಅವರಿಗೆ ಅವಕಾಶಗಳ ದಿಡ್ಡಿಬಾಗಿಲನ್ನು ತೆರೆದಿವೆ. 'ಗರುಡ', 'ರಂಗಮಂದಿರ', 'ತಾಯಿಗೆ ತಕ್ಕ ಮಗ' ಹೀಗೆ ಅವರು ನಟಿಸಿರುವ ಚಿತ್ರಗಳ ಪಟ್ಟಿಯೂ ಬೆಳೆಯುತ್ತಲೇ ಹೋಗುತ್ತದೆ. ಆದರೆ ಮುಕ್ತವಾದ ಆಕಾಶ ಸಿಕ್ಕಿದೆಯೆಂದು ಯದ್ವಾತದ್ವಾ ಹಾರಾಡುವ ಮನಸ್ಥಿತಿ ಅವರದಲ್ಲ. ಮೊದಲ ಹಂತದಲ್ಲಿಯೇ ಎಚ್ಚರಿಕೆಯ ಹೆಜ್ಜೆ ಇಡುವ ವಿವೇಕ ಅವರ ಮಾತುಗಳಲ್ಲಿ ಎದ್ದು ಕಾಣುತ್ತದೆ.

ತಮ್ಮ ಮನಸಿಗೆ ಒಪ್ಪುವಂಥದ್ದು, ಹಾಗೆಯೇ ವೃತ್ತಿಜೀವನವನ್ನು ಹೆಚ್ಚು ಸಮೃದ್ಧಗೊಳಿಸುವಂಥ ಅವಕಾಶಗಳನ್ನು ಮಾತ್ರ ಒಪ್ಪಿಕೊಳ್ಳುವ ಪಣ ಮಾಡಿದ್ದಾರಂತೆ ಆಶಿಕಾ. 'ಬಂದ ಅವಕಾಶಗಳನ್ನೆಲ್ಲ ಒಪ್ಪಿಕೊಳ್ಳುತ್ತಿಲ್ಲ. ಒಂದೋ ನಿರ್ದೇಶಕ ಪ್ರತಿಭಾವಂತ ಆಗಿರಬೇಕು. ಇಲ್ಲವೇ ಕಥೆ ತುಂಬಾ ಆಸಕ್ತಿದಾಯಕ ಆಗಿರಬೇಕು. ಇಲ್ಲದಿದ್ದರೇ ಖಂಡಿತ ಒಪ್ಪಿಕೊಳ್ಳುವುದಿಲ್ಲ' ಎಂದು ಖಡಾಖಂಡಿತವಾಗಿ ಹೇಳುವ ಅವರಿಗೆ ಕಮರ್ಷಿಯಲ್ ಸಿನಿಮಾಗಳ ಮೆರವಣಿಗೆಯ ಜತೆಗೆ ಪ್ರಯೋಗಾತ್ಮಕ ಚಿತ್ರಗಳ ಪೋಷಕಾಂಶವನ್ನೂ ತಮ್ಮೊಳಗಿನ ಕಲಾವಿದೆಗೆ ಉಣಿಸಬೇಕು ಎಂಬ ಪರಿವು ಇದೆ. ಹಾಗಾಗಿಯೇ ಹೊಸ ನಿರ್ದೇಶಕರ, ಪ್ರಯೋಗಶೀಲ ಸಿನಿಮಾಗಳಿಗೂ ಅಂಕಿತ ಒತ್ತುತ್ತಿದ್ದಾರೆ. ಈ ಆಸೆಯಿಂದಲೇ ಅವರು ಇತ್ತೀಚೆಗೆ ಹೊಸ ಪ್ರತಿಭಾವಂತ ನಿರ್ದೇಶಕರ ಕಥೆಯನ್ನು ಹೆಚ್ಚು ಹೆಚ್ಚು ಕೇಳುತ್ತಿದ್ದಾರೆ. ಸತ್ಯಪ್ರಕಾಶ್ ತಂಡದ ಹೊಸ ನಿರ್ದೇಶಕರೊಬ್ಬರು ಹೇಳಿದ ಕಥೆ ಅವರ ಮನಸ್ಸಿಗೆ ಹತ್ತಿರವೂ ಆಗಿದೆ.